# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 84 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ.ಫಾರೂಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | **12.09.2022** |
| **ಉತ್ತರಿಸುವವರು** | : | **ಸನ್ಮಾನ್ಯ ಮುಖ್ಯಮಂತ್ರಿಗಳು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನ ಕುರ್ನಾಡು, ಇರಾ ಗ್ರಾಮಗಳಲ್ಲಿ ಕಾಡು ಕೋಣಗಳ ಹಾವಳಿಯಿಂದ ರೈತರ ಬೆಳೆಹಾನಿಯಾಗುತ್ತಿರುವುದಲ್ಲದೆ ಸದರಿ ಪ್ರದೇಶದ ಸುತ್ತಮುತ್ತಲಿನಲ್ಲಿ ವಾಸಿಸುತ್ತಿರುವ ಸಾರ್ವಜನಿಕರು ಓಡಾಡಲು ಭಯುಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಗಳೂರಿನ ಕುರ್ನಾಡು ಮತ್ತು ಇರಾ ಗ್ರಾಮಗಳಲ್ಲಿ ಕಾಡುಕೋಣಗಳು ಬೇಸಿಗೆ ಸಮಯದಲ್ಲಿ ನೀರಿನ ದಾಹವನ್ನು ನೀಗಿಸಲು ರೈತರ ಕೃಷಿ ಭೂಮಿಗೆ ಬರುತ್ತಿದ್ದು, ಈ ಸಂಧರ್ಭದಲ್ಲಿ ಬೆಳೆ ಹಾನಿ ಮಾಡುವ ಸಂಭವವಿರುತ್ತದೆ.<br><br>ಆದರೆ, ಬೆಳೆ ಹಾನಿಯಾದ ಬಗ್ಗೆ ಪರಿಹಾರ ಧನ ಕೋರಿ ರೈತರು ಅರ್ಜಿ ಸಲ್ಲಿಸಿರುವುದಿಲ್ಲ. ರೈತರು ಅರ್ಜಿ ಸಲ್ಲಿಸಿದ್ದಲ್ಲಿ ನಿಯಮಾನುಸಾರ ಸೂಕ್ತ ಪರಿಹಾರ ಧನವನ್ನು ಪಾವತಿಸುವಲ್ಲಿ ಕ್ರಮ ಕೈಗೊಳ್ಳಲಾಗುವುದು.<br><br>ಸದರಿ ಪ್ರದೇಶದ ಸುತ್ತಮುತ್ತಲಿನಲ್ಲಿ ವಾಸಿಸುತ್ತಿರುವ ಸಾರ್ವಜನಿಕರು ಓಡಾಡಲು ಭಯಪಡುತ್ತಿರುವ ಬಗ್ಗೆ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. |
| ಆ) | ಹಾಗಿದ್ದಲ್ಲಿ, ಕಾಡಿನಿಂದ ನಾಡಿಗೆ ಬರುವ ಕಾಡು ಕೋಣಗಳನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು? | ಕಾಡಿನಿಂದ ನಾಡಿಗೆ ಬರುವ ಕಾಡುಕೋಣಗಳ ಹಾವಳಿಯಿಂದ ಬೆಳೆ ಹಾಗೂ ಜನರನ್ನು ರಕ್ಷಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>1. ಕಾಡುಕೋಣಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸುವುದು.<br>2. ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ.<br>3. ಆನೆ ನಿರೋಧಕ ಕಂದಕ ತೋಡುವುದು. ಹಳ್ಳ ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರೀಟ್ ರಚನೆ ಮಾಡಲಾಗುತ್ತಿದೆ.<br>4. ಸಾರ್ವಜನಿಕರಲ್ಲಿ ವನ್ಯಪ್ರಾಣಿಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಾಗಾರ ಏರ್ಪಡಿಸುವುದು.<br>5. ಕೃಷಿ ಭೂಮಿಗೆ ಬಂದಂತಹ ಕಾಡುಪ್ರಾಣಿಗಳನ್ನು ಹಿಮ್ಮೆಟ್ಟಿಸಲು Anti-Depredation Camp ಗಳನ್ನು ನಿರ್ವಹಿಸಲಾಗುತ್ತಿದೆ. |

**ಸಂಖ್ಯೆ: ಅಪಜೀ 125 ಎಫ್‌ಡಬ್ಲ್ಯೂಎಲ್ 2022**

**(ಬಸವರಾಜ ಬೊಮ್ಮಾಯಿ)**
**ಮುಖ್ಯಮಂತ್ರಿಗಳು**